ಕಲಘಟಗಿ ವಿಧಾನ ಸಭಾ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯ ಕಾಮಗಾರಿಗಳು

2213 (2376) ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರ ಗೌಡ (ಕಲಘಟಗಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕು ಕಲಘಟಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಈ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ಬಿಡುಗಡೆ ಮಾಡಿರುವಂತಹ ನಬಾರ್ಡ್ ಯೋಜನೆಯ ವಿವಿಧ ಕಾಮಗಾರಿಗಳ ವಿವರ ಅದಕ್ಕೆ ನೀಡಿದ ಹಣದ ವಿವರ, ಖರ್ಚಾದ ವಿವರ ನೀಡುವುದು;

ಆ) ಈ ನಿಟ್ಟಿನಲ್ಲಿ ಸದರಿ ಕ್ಷೇತ್ರಕ್ಕೆ ಈ ಯೋಜನೆಯಡಿ ಲೋಕೋಪಯೋಗಿ ಅಥವಾ ಜಿಲ್ಲಾ ಪಂಚಾಯಿತಿಯ ವತಿಯಿಂದ ರಸ್ತೆ ಕಾಮಗಾರಿ ಅಥವಾ ಸೇತುವೆ ನಿರ್ಮಾಣ ಇತ್ಯಾದಿ ಯೋಜನೆ ಕಾಮಗಾರಿಗಳಿಗೆ ಹಣ ನೀಡದಿರುವ ವಿಚಾರ ನಿಜವೇ; ಇದಕ್ಕೆ ಕಾರಣಗಳೇನು;

ಇ) ಸರ್ಕಾರ ಅಧಿಕಾರಕ್ಕೆ ಬಂದು 4 ವರ್ಷಗಳು ಮುಗಿಯುತ್ತಾ ಬಂದರೂ ಸಹ ನಮ್ಮ ಕ್ಷೇತ್ರದ ಇದರಡಿ ಕಾಮಗಾರಿ ಅನುಷ್ಠಾನಕ್ಕೆ ಹಣ ಮಂಜೂರು ಮಾಡದೇ ಇರುವ ಉದ್ದೇಶಗಳೇನು; ವಿವರಿಸಿ;

ಈ) ಮಂಜೂರು ಮಾಡುವ ಪ್ರಸ್ತಾಪ / ಇಚ್ಛೆ ಸರ್ಕಾರಕ್ಕಿದ್ದಲ್ಲಿ, ಯಾವಾಗ ನೀಡಲಾಗುತ್ತದೆ; ಎಷ್ಟು ಹಣ ನೀಡಲಾಗುತ್ತದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಲಘಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಂಚಿಹೊಳೆ ಕಲಕುಂದಿ ಹಳ್ಳಿ ರಸ್ತೆ - 98.00 ಲಕ್ಷ ರೂ. ಮತ್ತು ದುಮ್ಮವಾಡ ಉಣ್ಣಿನಕೇರಿ ಹಳ್ಳಿ ರಸ್ತೆ - 115.00 ಲಕ್ಷ ರೂ. ಮೊತ್ತಗಳಿಗೆ ಅನುಮೋದನೆ ನೀಡಿದ್ದು, ನಬಾರ್ಡ್ ಸಾಲ ಮಂಜೂರಾತಿ ನೀಡಲು ತಿರಸ್ಕರಿಸಿರುತ್ತದೆ.

ಆ) ಮೇಲೆ ತಿಳಿಸಿರುವ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ ಯಾವುದೇ ಕಾಮಗಾರಿ ಮಂಜೂರಾಗಿರುವುದಿಲ್ಲ.

ಇ) 1999-2000 ಮತ್ತು 2000-2001ರಲ್ಲಿ ಮೇಲೆ ತಿಳಿಸಿರುವ 2 ರಸ್ತೆ ಕಾಮಗಾರಿಗಳಿಗೆ ಸರ್ಕಾರ ಅನುಮೋದನೆ ನೀಡಿದ್ದು, ನಬಾರ್ಡ್‌ನಿಂದ ಸಾಲ ಮಂಜೂರಾಗಿರುವುದಿಲ್ಲ. ಮತ್ತು 2001-02 ಮತ್ತು 2002-3ನೇ ವರ್ಷಗಳಲ್ಲಿ ಸರ್ಕಾರವು ಯಾವುದೇ ಹೊಸ ಕಾಮಗಾರಿಗಳಿಗೆ ಈ ಯೋಜನೆಯಡಿ ಅನುಮೋದನೆ ನೀಡಿರುವುದಿಲ್ಲ.

ಈ) ಈ ಬಗ್ಗೆ ಸರ್ಕಾರ ಇನ್ನು ಯಾವುದೇ ನಿರ್ಧಾರ ಕೈಗೊಂಡಿರುವುದಿಲ್ಲ.

ಚಿಂತಾಮಣಿ ತಾಲ್ಲೂಕಿನಲ್ಲಿ ಪುರಸಭೆ ವ್ಯಾಪ್ತಿಯಿಂದ 5 ಕಿಮೀ ವ್ಯಾಪ್ತಿಯಲ್ಲಿನ ಅಕ್ರಮ ಸಾಗುವಳಿಗೆ ಸಂಬಂಧಪಟ್ಟಂತೆ

2214 (2393) ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ತಹಶೀಲ್ದಾರರಿಗೆ ಕೋಲಾರ ಜಿಲ್ಲಾಧಿಕಾರಿಗಳು ದಿನಾಂಕ 25/11/2002ರಲ್ಲಿ ಕುರಟಹಳ್ಳಿ ಗ್ರಾಮದ ಸರ್ವೆ ನಂಬರ್ 3ರಲ್ಲಿ ಒಂದು ಎಕರೆ ಎಂಟು ಗುಂಟೆ ಜಮೀನನ್ನು ಅಕ್ರಮವಾಗಿ ಉತ್ತಿರುವುದನ್ನು ಸಕ್ರಮಗೊಳಿಸಿರುವುದು ಸರಿಯಲ್ಲವೆಂದು ವಜಾ

ಮಾಡುತ್ತಾ ಚಿಂತಾಮಣಿ ನಗರ ಸಭೆಯ ವ್ಯಾಪ್ತಿಯಿಂದ 5 ಕಿಮೀ ಒಳಗಡೆ ಇರತಕ್ಕಂತಹ ಅರ್ಜಿಗಳನ್ನು ಪರಿಗಣಿಸದೆ ತರಬೇಕೆಂದು ತಿಳಿಸಿರುವುದು ನಿಜವೆ;

ಆ) ಚಿಂತಾಮಣಿ ನಗರದ ಸರಹದ್ದಿನಿಂದ ಆಚೆ 5 ಕಿಮೀ ಒಳಗಡೆ ಇರತಕ್ಕಂತಹ ಹಳ್ಳಿಗಳು ಯಾವುವು ಎಂದು ತಿಳಿಸದೆ ಅಸಹಾಯಕತೆಯನ್ನು ತೋರಿರುವುದು ನಿಜವೇ;

ಇ) ಈ ತರಹ ಪ್ರಸಂಗಗಳನ್ನು ಯಾವ ರೀತಿ ತೀರ್ಮಾನ ಮಾಡುವುದೆಂಬುದನ್ನು ಸರ್ಕಾರ ಪರಿಶೀಲನೆ ಮಾಡಿ ತಿಳಿಸಲು ಸಾಧ್ಯವೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು.

ಆ) ಅರ್ಜಿದಾರರು ಈ ಬಗ್ಗೆ ಕೋರಿಕೆ ಸಲ್ಲಿಸಿದ್ದಲ್ಲಿ ತಿಳಿಸಲಾಗುತ್ತಿತ್ತು.

ಇ) ಈ ಬಗ್ಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94-ಎ (4)ರ ಪರಂತುಕದಲ್ಲಿ ಪುರಸಭೆ ವ್ಯಾಪ್ತಿಯಿಂದ 5 ಕಿ.ಮೀ. ವ್ಯಾಪ್ತಿಯಲ್ಲಿನ ಜಮೀನನ್ನು ಜಮೀನಿನ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲಾಗುವುದಿಲ್ಲವೆಂದು ಸ್ಪಷ್ಟವಾಗಿರುತ್ತದೆ.

ಲೋಕೋಪಯೋಗಿ ಇಲಾಖೆಯಲ್ಲಿ ಒಂದು ಲಕ್ಷ ರೂ. ಗಿಂತ ಹೆಚ್ಚು ಅಕ್ರಮ ಪಾವತಿ ಮಾಡಿದ ಪ್ರಕರಣಗಳು

2216 (2566) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ 11/10/1999ರ ನಂತರ ರೂ. 1 ಲಕ್ಷಕ್ಕಿಂತ ಹೆಚ್ಚು ಅಕ್ರಮ ಪಾವತಿ ಮಾಡಿದ ಪ್ರಕರಣಗಳು ಎಷ್ಟು; (ಪ್ರಕರಣವಾರು ವಿವರ ಕೊಡುವುದು);

ಆ) ಈ ರೀತಿ ಪಾವತಿ ಮಾಡಿದ ಅಧಿಕಾರಿಗಳು ಯಾರು; ಅವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಲೋಕಾಯುಕ್ತದವರು ಲೋಕೋಪಯೋಗಿ ಇಲಾಖೆಯ ವಿರುದ್ಧ ದಾಖಲು ಮಾಡಿರುವ ಪ್ರಕರಣಗಳೆಷ್ಟು; ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮ ಏನು; (ವಿವರ ಕೊಡುವುದು);

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಪ್ರಕರಣಗಳು 2.

ಒಳಗೊಂಡ ಮೊಬಲಗು 1. 1,20,413-00 ರೂ.

2. 3,36,801-00 ರೂ.

ಆ)1) ಶ್ರೀ ಎಂ. ಸುಬ್ಬಣ್ಣ ಸ.ಕಾ.ಇಂ (ನಿ) ಹಾಗೂ ಶ್ರೀ ಹೆಚ್. ನಾಗರಾಜ್, ಕಿ.ಇಂ. ಇವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಪ್ರಸ್ತಾವನೆಯು ಜಾರಿಯಲ್ಲಿರುತ್ತದೆ.

2) ರೂ. 3,36,801-00 ಗಳನ್ನು ಮಾನ್ಯ ಲೋಕಾಯುಕ್ತದವರ ಶಿಫಾರಸ್ಸಿನಂತೆ ಈ ಕೆಳಕಂಡ ಅಧಿಕಾರಿಗಳಿಂದ ವಸೂಲು ಮಾಡಲಾಗಿದೆ.

1. ಎಸ್. ನಾಗರಾಜಯ್ಯ ಅ.ಇಂ. 62,400-00 ರೂ.
2. ಹೆಚ್.ಆರ್. ಮಾರುತಿ, ಕಿ.ಇಂಗ. 41,625-00 ರೂ.
3. ಪಿ. ಚನ್ನಪ್ಪನಾಯ್ಕ ಕಾ.ಇಂ. 1,71,708-00 ರೂ.